ಹಾಗೂ ಅವರೊಬ್ಬ ಉನ್ನತ ದಾರ್ಶನಿಕರೂ ಆಗಿದ್ದರೆಂದು ವಿದ್ವತ್ಪ್ರಪಂಚ ಗುರುತಿಸಿದೆ. ಅವರು ರಚಿಸಿರುವ **ನ್ಯಾಯಾಮೃತ, ತರ್ಕತಾಂಡವ, ತಾತ್ಪರ್ಯ ಚಂದ್ರಿಕಾ** ಮುಂತಾದ ಗ್ರಂಥಗಳು ಮಧ್ವಸಿದ್ಧಾಂತದ ತ್ರಿರತ್ನಗಳಿದ್ದಂತೆ ಇವೆ. ವ್ಯಾಸರಾಜರ ಮಹಿಮೆಯನ್ನು ಪುರಂದರ ದಾಸರು ಹೀಗೆ ಕೊಂಡಾಡಿದ್ದಾರೆ:

**ವ್ಯಾಸರಾಯರ ಚರಣಕಮಲವೆನಗೇಸು**
**ಜನ್ಮದ ಸುಕೃತ ಫಲದಿ ದೊರೆತಿತೋ ಎನ್ನ**
**ಸಾಸಿರ ಕುಲಕೋಟಿ ಪಾವನ್ನವಾಯಿತೋ ...**
**ಶ್ರೀಶನ್ನ ಭಜಿಸುವುದಕಧಿಕಾರಿ ನಾನಾದೆ**
**ದೋಷರಹಿತನಾದ ಪುರಂದರವಿಠಲನ**
**ದಾಸರ ಕರುಣವೆನ್ನ ಮೇಲೆ ಇರಲಾಗಿ....**

ವ್ಯಾಸರಾಜರು ಉತ್ತರ ಭಾರತದಲ್ಲಿ ಸಂಚರಿಸಿ, ಅಂದಿನ ಪ್ರಸಿದ್ಧ ವಿದ್ವಾಂಸರಾದ ಕಾಶೀ ಮಿಶ್ರ, ಪಕ್ಷಧರ ಮಿಶ್ರ ಮೊದಲಾದ ವಿದ್ವಾಂಸರನ್ನು ಪರಾಭವಗೊಳಿಸಿದರೆಂಬ ಐತಿಹ್ಯವಿದೆ.

ಕಾಂಚೀ ಪಟ್ಟಣದಲ್ಲಿ ಶ್ರೀವ್ಯಾಸರಾಜರು ತಮ್ಮ ಒಂದು ಸುಪ್ರಸಿದ್ಧ ಶ್ಲೋಕವೊಂದನ್ನು ರಚಿಸಿದರು. ಮಧ್ವಸಿದ್ಧಾಂತದ ಒಂಭತ್ತು ತತ್ತ್ವಾಂಶಗಳನ್ನು ಸಂಗ್ರಹಿಸಿರುವ ಆ ಶ್ಲೋಕವನ್ನು 'ನವರತ್ನಮಾಲೆ' ಎಂದು ಕರೆಯುತ್ತಾರೆ.

ವ್ಯಾಸರಾಜರಿಗೆ ಸಾಮಾನ್ಯ ಜನರ ಮೇಲಿದ್ದ ಕರುಣೆ ಅಪಾರವಾದುದು. ಅದಕ್ಕೆ ನಿದರ್ಶನ ಎಂದರೆ ಅವರ ಕೀರ್ತನೆಗಳು. ಅಲ್ಲಿ ಅಭಿವ್ಯಕ್ತವಾಗಿರುವ ಕವಿಹೃದಯ, ಹರಿಭಕ್ತಿ, ತತ್ತ್ವಪ್ರತಿಪಾದನೆ, ಗೋಪಿಕಾಭಾವ, ಆಂತರಿಕ ನಿವೇದನೆ, ಕೃಷ್ಣಲೀಲಾನುಭವದ ಪ್ರಸಂಗಗಳು – ಇವುಗಳೆಲ್ಲದರಲ್ಲೂ ವ್ಯಾಸರಾಜರ ಪರಿಶುದ್ಧ ಭಕ್ತಹೃದಯ ಪ್ರಕಟವಾಗುತ್ತದೆ.

ತಮ್ಮ ತಾತ್ಪರ್ಯ ಚಂದ್ರಿಕಾ ಎಂಬ ಗ್ರಂಥದಲ್ಲಿ ವ್ಯಾಸರಾಜರು ತಮ್ಮ ವಿದ್ಯಾಗುರುಗಳಾದ ಶ್ರೀಪಾದರಾಜರನ್ನು ಹೀಗೆ ಪ್ರಶಂಸಿಸುತ್ತಾರೆ:

**ಪದವಾಕ್ಯ ಪ್ರಮಾಣಾಬ್ಧಿ ವಿಕ್ರೀಡನ ವಿಶಾರದಾನ್ ।**
**ಲಕ್ಷ್ಮೀನಾರಾಯಣಮುನಿಂ ವಂದೇ ವಿದ್ಯಾಗುರೂನ್ ಮಮ ॥**

ಪದ, ವಾಕ್ಯ, ಪ್ರಮಾಣಗಳ ಸಾಗರದಲ್ಲಿ ವಿಹರಿಸುತ್ತಿರುವ ಲಕ್ಷ್ಮೀನಾರಾಯಣ ಎಂಬ ಹೆಸರಿನವರಾದ, ನನ್ನ ವಿದ್ಯಾಗುರುಗಳಾದ ಶ್ರೀಪಾದರಾಜರಿಗೆ ನಮಸ್ಕಾರ.

ಸ್ವಾರಸ್ಯಕರವೋ ಎಂಬಂತೆ, ಶ್ರೀಪಾದರಾಜರೂ ಕೂಡ ತಮ್ಮ ಪ್ರಿಯಶಿಷ್ಯನನ್ನು ಕೆಳಗಿನ ಕನ್ನಡ ನುಡಿಗಳಲ್ಲಿ ಹೊಗಳಿದ್ದಾರೆ: **'ಇದಿರದಾವನು ವ್ಯಾಸ ಮುನಿರಾಯ ನಿನಗೀ ಧರೆಯೊಳು.'**

ವ್ಯಾಸರಾಜರು ಉದಾರಿಗಳು. ಒಮ್ಮೆ ಶ್ರೀರಂಗಕ್ಷೇತ್ರದಲ್ಲಿ ಶೈವ ಮತ್ತು ಶ್ರೀವೈಷ್ಣವ ದೇವಾಲಯಗಳ ಎಲ್ಲೆಯನ್ನು ಕುರಿತಂತೆ ವಾದವಿವಾದ ಪ್ರಬಲಗೊಂಡು, ಪ್ರಕೋಪಕ್ಕೆ ಹೋಯಿತು. ಆಗ ವ್ಯಾಸರಾಜರು ಅದನ್ನು ಬಹಳ ಸರಳವಾಗಿ ತೀರ್ಮಾನಿಸಿದರಂತೆ.

ಅನಂತರ ವ್ಯಾಸರಾಜರು ಉಡುಪಿಗೆ ಬಂದರು. ಅಲ್ಲಿಂದ ವಿಜಯನಗರಕ್ಕೆ ಬಂದು ರಾಜಗುರುವಾಗಿ ಮುಂದುವರಿದರು; ಅನೇಕ ದೇವತಾಮೂರ್ತಿಗಳನ್ನು ಸಂಸ್ಥಾಪಿಸಿದರು. ವ್ಯಾಸರಾಜರನ್ನು ಇತರ ಸಂಪ್ರದಾಯದ ವಿದ್ವಾಂಸರೂ, ಗಣ್ಯರೂ ಗೌರವಿಸುತ್ತಿದ್ದರು. ಕಳಿಂಗ ದೇಶದಿಂದ ಬಂದ ಬಸವ ಭಟ್ಟ ಎಂಬ ವಿದ್ವಾಂಸನು ಅವರ ಜೊತೆ ಒಂದು ತಿಂಗಳ ಕಾಲ ವಾದವಿವಾದ ನಡೆಸಿ, ಸೋಲನ್ನೊಪ್ಪಿಕೊಂಡು ತನ್ನಲ್ಲಿದ್ದ ಅಪೂರ್ವವಾದ ಪಚ್ಚೆ ಶಿವಲಿಂಗವನ್ನು ಸಮರ್ಪಿಸಿದನು. ವ್ಯಾಸರಾಯರೂ ಕೂಡ, ಬಸವಭಟ್ಟನನ್ನು ಔದಾರ್ಯದಿಂದ ಬಹುಮಾನಿಸಿದರು. ಇಂದೂ ವ್ಯಾಸರಾಯರ ಮಠದಲ್ಲಿ ಶಿವರಾತ್ರಿಯಂದು ಈ ಪಚ್ಚೆಲಿಂಗಕ್ಕೆ ಪೂಜೆ ಸಲ್ಲುತ್ತದೆ.

ಶ್ರೀಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯವು ವೈಭವದಿಂದ ಮೆರೆಯಿತು. ಆ ಅವಧಿಯಲ್ಲಿ ಅಲ್ಲಿಗೆ ಭೇಟಿಕೊಟ್ಟ ಪೇಸ್ (Paes) ಎಂಬ ವಿದೇಶೀಯನು ಅತ್ಯಂತ ಗೌರವಾನ್ವಿತನಾದ ಬ್ರಾಹ್ಮಣನಿಂದ ಕೃಷ್ಣದೇವರಾಯನು ಆಶೀರ್ವಾದ ಪಡೆಯುತ್ತಿದ್ದನು ಎಂದು ಬರೆದಿದ್ದಾನೆ. ಅವನು ಶ್ರೀವ್ಯಾಸರಾಜರನ್ನೇ ಉಲ್ಲೇಖಿಸಿರುವನೆಂಬುದು ನಿಸ್ಸಂದೇಹ.

(ಮುಂದಿನ ತಿಂಗಳು: ಶ್ರೀವ್ಯಾಸರಾಜರ ಕೃತಿಗಳು)

---

### ಚಿಂತನ ಪ್ರಭ

#### ಶಮದಿಂದ ಶಾಂತಿ

**ನಿಜವಾದ ಶಾಂತಿಗೆ ಮುನ್ನ ಮನುಷ್ಯ ಶಮವನ್ನು (ಶರೀರ ಮತ್ತು ಮಾನಸಿಕ ನಿಯಂತ್ರಣ) ಸಾಧಿಸಬೇಕಾಗುತ್ತದೆ. ಶಮವಿಲ್ಲದ ಶಾಂತಿ ಬರಿಯ ಭ್ರಾಂತಿ. ವ್ಯಷ್ಟಿಗಳು ಸೇರಿ ಸಮಷ್ಟಿಯಾಗಿದೆ. ಸಮಷ್ಟಿಯೂ ಅನೇಕ ವ್ಯಷ್ಟಿಗಳಾಗಿ ಮೈದೋರಿದೆ. ಆದ್ದರಿಂದ ವ್ಯಷ್ಟಿ ವ್ಯಷ್ಟಿಯೂ ತನ್ನಲ್ಲಿ ಶಮವನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸಿದರೆ, ಸಮಷ್ಟಿಯ ಶಮಕ್ಕೆ ಬಲವಾದ ತಳಹದಿಯಾಗುತ್ತದೆ. ವ್ಯಷ್ಟಿ ವ್ಯಷ್ಟಿಗಳ ಅಹಂಕಾರ ಶಮನವಾದರೆ, ಸಮಷ್ಟಿ ಸಮಷ್ಟಿಗಳ ಅಹಂಕಾರವೂ ಶಮನವಾಗುವುದು ಸಾಧ್ಯ. ದೇಶಭಕ್ತಿ, ರಾಷ್ಟ್ರೀಯತೆ, ಸ್ವಮತ, ಸ್ವಸಂಸ್ಕೃತಿ, ಸ್ವಭಾಷಾಭಿಮಾನಗಳೆಲ್ಲ ಅಹಂಕಾರಮೂಲವಾದ ವ್ಯಷ್ಟಿ ಪ್ರತಿಷ್ಠೆಯ ಸಮಷ್ಟಿರೂಪಗಳಲ್ಲದೆ ಮತ್ತೇನು? ಆದ್ದರಿಂದ ವ್ಯಷ್ಟಿ ವ್ಯಷ್ಟಿಗಳಲ್ಲಿ ಅಂತಹ ಶಮಸಾಧನೆಯಿಂದ ಮಾಡುವ ಮೂಲ ಪರಿವರ್ತನೆಗಾಗಿ, ನಾವು ಸಾಮೂಹಿಕವಾಗಿ ಕಾರ್ಯೋನ್ಮುಖರಾಗದಿದ್ದರೆ, ಬರಿಯ ಅರ್ಥಶಾಸ್ತ್ರದ ಅಥವಾ ರಾಜಕೀಯಶಾಸ್ತ್ರದ ತೇಪೆ ಹಾಕುವ ಕುಶಲಕರ್ಮದಿಂದ ಎಂದಿಗೂ ಸರ್ವರೂ ಅಪೇಕ್ಷಿಸುವ ಸಮಷ್ಟಿ ಶಾಂತಿ ಸಿದ್ಧಿಸುವುದಿಲ್ಲ. ಸ್ವಭಾವ ಬದಲಾಯಿಸದೆ, ಬದುಕು ಬದಲಾಯಿಸುವುದಿಲ್ಲ. ಅಂತಹ ಬದಲಾವಣೆಗಾಗಿ ಲೋಕಶೋಷಣೆ ಮಾಡಬೇಕಾಗಿಲ್ಲ. ನಮ್ಮ ಸ್ವರೂಪದಲ್ಲಿಯೇ ಆ ದೈವೀಶಕ್ತಿ ಸುಪ್ತವಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಅದನ್ನು ಎಚ್ಚರಗೊಳಿಸಲು ಪ್ರಯತ್ನ ಮಾಡಿದರೆ, ಲೋಕಕಲ್ಯಾಣಕ್ಕೆ ಪ್ರತ್ಯಕ್ಷವಾಗಿ ಸಕ್ರಿಯವಾಗಿ ನೆರವಾಗುತ್ತಾನೆ. ಈ ದೈವೀ ಸ್ವರೂಪವೇ ಸ್ವಭಾವವಾದರೆ, ಅದನ್ನು ಅನುಷ್ಠಾನಕ್ಕೆ ತರುವ ಸ್ವಧರ್ಮ ಸ್ವತಃಸಿದ್ಧವಾಗಿ, ತದನುಗುಣವಾದ ಸ್ವಕರ್ಮದಲ್ಲಿ ಸುಪ್ರತಿಷ್ಠಿತವಾಗಿಯೇ ಆಗುತ್ತದೆ. ಪುರಾತನ ಮಹರ್ಷಿಗಳೆಲ್ಲರಿಂದಲೂ ಒಂದಲ್ಲ ಒಂದು ರೀತಿಯಿಂದ ಘೋಷಿತವಾಗುತ್ತಲೇ ಬಂದಿರುವ ಈ ಪುರಾತನ ಸತ್ಯವು ನಮ್ಮ ಅರ್ವಾಚೀನ ವಿಭೂತಿಗಳಿಂದ ಮತ್ತೊಮ್ಮೆ ಆಧುನಿಕವಾಗಿ ಮಹೋಜ್ವಲವಾಗಿ ಪ್ರಕಾಶಿತವಾಗಿದೆ.**

**– ಶ್ರೀ ಕುವೆಂಪು (ವಿಭೂತಿಪೂಜೆ)**